ಅಧ್ಯಕ್ಷರು.—ನಾನು ಫೈಲ್ ತರಿಸಿ ನೋಡುತ್ತೇನೆ. ಸಾಧ್ಯವಾದರ ನಾಳೆ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ಪಂಪಾಪತಿ.—ನಾನು ಕುದುರೆಮುಖ ನೌಕರರ ವಿಚಾರದ ಬಗ್ಗೆ ಒಂದು ನೋಟೀಸ್ ಕೊಟ್ಟಿದ್ದೆ. ಅದನ್ನು ಯಾವಾಗ ತೆಗೆದುಕೊಳ್ಳುತ್ತೀರಿ ?

ಅಧ್ಯಕ್ಷರು.—ನಿಮಗೆ ಏನಾದರೂ ತೊಂದರೆ ಇದ್ದರೆ, ನನ್ನ ಛೇಂಬರಿಗೆ ಬಂದು ನೋಡಿ. ಅದನ್ನು ಇಲ್ಲಿ ಹೇಳುವುದಿಲ್ಲ.

ಶ್ರೀ ಎಂ. ಪಂಪಾಪತಿ.—ಕುದುರೆ ಮುಖದಲ್ಲಿ ಕೆಲಸ ಮಾಡುತ್ತಿರುವ ನೌಕರರ ಮೇಲೆ ಲಾಠಿ ಛಾರ್ಜ್ ಮಾಡಿದ್ದಾರೆ---

ಅಧ್ಯಕ್ಷರು.—ನೀವು ಹೀಗೆ ಮಾತನಾಡುತ್ತಾ ಹೋದರೆ, ಅದು ರಿಕಾರ್ಡಿಗೆ ಹೋಗುವುದಿಲ್ಲ.

ಶ್ರೀ ಆರ್.ಎನ್. ನಾಯಕ್.—ನಾನು ಒಂದು ಅರ್ಧಗಂಟೆ ಕಾಲದ ಚರ್ಚೆಗೆ ಕೊಟ್ಟಿದ್ದೆ. ಅದು ಏನಾಯಿತು ?

ಅಧ್ಯಕ್ಷರು.—ತಾವು ಕೂಡ್ರಿ, ಹೇಳುತ್ತೇನೆ.

ಶ್ರೀ ಎಂ. ಪಂಪಾಪತಿ.—ನಾನು ಮೊದಲೇ ಹೇಳಿದಹಾಗೆ ಕುದುರೆಮುಖದಲ್ಲಿ ಗಲಾಟೆ ಆಗಿ, ಅಲ್ಲಿ ಕಾರ್ಖಾನೆ ಬಂದ್ ಆಗಿದೆ, ಕಾರ್ಮಿಕರಿಗೆ ಪೆಟ್ಟು ಬಿದ್ದಿದೆ. ಒಬ್ಬ ಸತ್ತುಹೋಗಿದ್ದಾರೆ. ಇದು ಬಹಳ ಪ್ರಾಮುಖ್ಯವಾದ ವಿಷಯ.

ಅಧ್ಯಕ್ಷರು.—ನೀವು ನಮ್ಮ ಛೇಂಬರಿಗೆ ಬನ್ನಿ ತಿಳಿದು ಹೇಳುತ್ತೇನೆ.

ಶ್ರೀ ಎಂ. ರಾಮಪ್ಪ.—ಇನ್ನು ನಾಲ್ಕೈದು ದಿನಗಳಲ್ಲಿ ಅಧಿವೇಶನ ಮುಗಿಯುತ್ತದೆ. ನಾಳೆ, ನಾಡಿದ್ದರಲ್ಲಿ ತೆಗೆದುಕೊಳ್ಳುತ್ತೀರಾ ?

ಅಧ್ಯಕ್ಷರು.—ನಾನು ನೋಡುತ್ತೇನೆ. ನೀವು, ಪಂಪಾಪತಿಯವರು, ನಾಯಕರವರು ಎಲ್ಲರೂ ನನ್ನ ಛೇಂಬರಿಗೆ ಬನ್ನಿ, ನಾನು ಫೈಲ್ ತರಿಸಿ ನೋಡುತ್ತೇನೆ.

ಶ್ರೀ ಎಂ. ರಾಮಪ್ಪ.—ನಾವು ಈ ಸದನಕ್ಕೆ ಬಂದಿರುವುದು ಏತಕ್ಕೆ ? ನಮಗೆ ಈ ರೀತಿ ಮಾಡಿದರೆ ಆಗೌರವ ಆದೀತು ದಯವಿಟ್ಟು ನಾಳೆ ನಾಡಿದ್ದರಲ್ಲಿ ತೆಗೆದುಕೊಳ್ಳುತ್ತೀರಾ ?

ಅಧ್ಯಕ್ಷರು.—ನಾನು ನೋಡುತ್ತೇನೆ. ಗೃಹ ಮಂತ್ರಿಯವರು ಬಂದಮೇಲೆ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳುತ್ತೇನೆ. ಈಗ ಮ್ಯಾಟರ್ ಅಂಡರ್ ರೂಲ್ ೩೩೪ ತೆಗೆದುಕೊಳ್ಳೋಣ.

ನಿಯಮ ೩೩೪ರ ಮೇರೆಗೆ

ಶ್ರೀ ಎಂ. ಎಸ್. ಕೃಷ್ಣನ್.—ಸದಸ್ಯರು ಹಾಜರಿಲ್ಲ.

(೧) ಪುತ್ತೂರಿನ ಆಸ್ಪತ್ರೆಯಲ್ಲಿ ವೈದ್ಯರು ಮಂತ್ರಿತರ ಸಾಲಭ್ಯವಿಲ್ಲದೆ ತೊಂದರೆ

ಶ್ರೀ ವಿನಯಕುಮಾರ್ ಸೊರಕೆ.—ಮಾನ್ಯ ಅಧ್ಯಕ್ಷರೆ, ಪುತ್ತೂರಿನಲ್ಲಿರುವ ಸರ್ಕಾರಿ ಆಸ್ಪತ್ರೆಯಿಂದ ಸಾರ್ವಜನಿಕರಿಗೆ ಸಮರ್ಪಕ ಚಿಕಿತ್ಸೆ ದೊರೆಯುತ್ತಿಲ್ಲ. ಇದಕ್ಕೆ ಆಸ್ಪತ್ರೆಯಲ್ಲಿ ವೈದ್ಯರು, ಔಷಧಿ, ಸಲಕರಣೆ, ಹಾಸಿಗೆ ಮುಂತಾದ ಸೌಲಭ್ಯಗಳ ಕೊರತೆಯೇ ಕಾರಣವಾಗಿದೆ.

ಈ ಆಸ್ಪತ್ರೆಯಲ್ಲಿದ್ದ ಮೆಡಿಕಲ್ ಆಫೀಸರ್‌ರವರನ್ನು ವರ್ಗಮಾಡಿದ್ದು, ತೆರವಾದ ಜಾಗಕ್ಕೆ ಇದುವರೆಗೂ ಬೇರೆ ಯಾವ ದಕ್ಷ ವೈದ್ಯರನ್ನೂ ನೇಮಿಸದಿರುವುದರಿಂದ, ಇರುವ ಇಬ್ಬರು ವೈದ್ಯರಿಂದ ಸಾರ್ವಜನಿಕರಿಗೆ ಸಮರ್ಪಕ ಹಾಗೂ ಶೀಘ್ರ ಚಿಕಿತ್ಸೆ ನೀಡಲು ಸಾಧ್ಯವಾಗುತ್ತಿಲ್ಲ. ಈ ಆಸ್ಪತ್ರೆಯಲ್ಲಿ ಯಾವುದೇ ತರಹದ ಔಷಧಗಳೂ ಸಲಕರಣೆಗಳು ಹಾಗೂ ಹಾಸಿಗೆಗಳೂ ಇರುವುದಿಲ್ಲ. ಎಷ್ಟೋ ವೇಳೆ ಈ ಆಸ್ಪತ್ರೆಯಲ್ಲಿ ಹತ್ತಿಯೂ ಸಹ ಇರದೆ ಅದನ್ನು ಬೇರೆ ಕಡೆಯಿಂದ ತರಿಸಿದ ನಿದರ್ಶನಗಳೂ ಇದೆ.

ಈಗಿರುವ ಆಸ್ಪತ್ರೆಯು ೬೪ ಹಾಸಿಗೆಗಳ ಆಸ್ಪತ್ರೆಯಾಗಿದೆ. ದಿನೇದಿನೇ ಇಲ್ಲಿ ಬರುವ ರೋಗಿಗಳ ಸಂಖ್ಯೆ ಹೆಚ್ಚುತ್ತಿದ್ದು, ೬೪ ಹಾಸಿಗೆಗಳು ಸಾಲದಾಗಿದೆ. ಆದ್ದರಿಂದ ಈ ಆಸ್ಪತ್ರೆಯನ್ನು ೧೦೦ ಹಾಸಿಗೆಗಳ ಆಸ್ಪತ್ರೆಯನ್ನಾಗಿ ಪರಿವರ್ತಿಸುವುದೂ ಸಹ ತುಂಬಾ ಅವಶ್ಯಕವಾಗಿದೆ. ಚಿಕಿತ್ಸೆಗೆಂದು ಈ ಆಸ್ಪತ್ರೆಗೆ ಹೋಗುವ ರೋಗಿಗಳನ್ನು ಆಸ್ಪತ್ರೆಯ ಸಿಬ್ಬಂದಿಯವರು ಅವರನ್ನು ಉಪಚರಿಸದೇ ಇಲ್ಲಸಲ್ಲದ ನೆಪಹೇಳಿ ಖಾಸಗಿ ಆಸ್ಪತ್ರೆಗಳಿಗೆ ಕಳುಹಿಸುತ್ತಿದ್ದಾರೆ. ಆದಕಾರಣ ಸರ್ಕಾರದವರು ಆಸ್ಪತ್ರೆಯನ್ನು ಸ್ಥಾಪಿಸಿರುವ ಉದ್ದೇಶವೇ ಭಗ್ನವಾಗಿದೆ. ಆದಕಾರಣ, ಸರ್ಕಾರದವರಿಂ ಇಂತಹ ಸಿಬ್ಬಂದಿಯ ಮೇಲೆ ಸೂಕ್ತ ಕ್ರಮ ಕೈಗೊಂಡು ಬಂದ ರೋಗಿಗಳಿಗೆ ಚಿಕಿತ್ಸೆ ದೊರೆಯುವಂತೆ ಮಾಡುವುದೂ ಸಹ ಅತ್ಯವಶ್ಯವಾಗಿದೆ.

ಸಾರ್ವಜನಿಕರ ಹಿತದೃಷ್ಟಿಯಿಂದ ಸರ್ಕಾರದವರು ಕೂಡಲೇ ಈ ಆಸ್ಪತ್ರೆಗೆ ಒಬ್ಬ ದಕ್ಷ ಮೆಡಿಕಲ್ ಆಫೀಸರ್ ಹಾಗೂ ಚಿಕಿತ್ಸೆಗೆ ಅವಶ್ಯಕವಿರುವ ಔಷಧಿ ಹಾಗೂ ಸಲಕರಣೆಗಳನ್ನು ಪೂರೈಸಬೇಕೆಂದು ಸರ್ಕಾರದವರನ್ನು ಒತ್ತಾಯಿಸಲು ಈ ಸೂಚನೆ ನೀಡಲಾಗಿದೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮಂತ್ರಿಗಳು).—ಮಾನ್ಯ ಸದಸ್ಯರು ಇಲ್ಲಿ ಸಾಕಷ್ಟು ಔಷಧಿಗಳು ಇಲ್ಲವೆಂದು ಹೇಳಿದ್ದಾರೆ. ನಾನು ಸಂಬಂಧಪಟ್ಟ ಆರೋಗ್ಯ ಮಂತ್ರಿಗಳಿಗೆ ತಿಳಿಸಿ, ತಕ್ಷಣ, ಕಾರ್ಯಕ್ರಮ ತೆಗೆದುಕೊಳ್ಳುವಂತೆ ಹೇಳುತ್ತೇನೆ.

(೨) ರಾಜ್ಯದಲ್ಲಿ ನಾಲ್ಕು ಟೆಕ್ಸ್‌ಟೈಲ್ ಮಿಲ್ಲುಗಳು ಮುಚ್ಚಿರುವ ಬಗ್ಗೆ

ಶ್ರೀ ಎಂ. ಪಂಪಾಪತಿ.—ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಂಡು ಈ ಕೆಳಗಿನ ವಿಷಯದ ಕುರಿತು ಅವರ ಗಮನ ಸೆಳೆಯುತ್ತೇನೆ.

ರಾಜ್ಯದಲ್ಲಿ ನಾಲ್ಕು ಟೆಕ್ಸ್‌ಟೈಲ್ಸ್ ಮಿಲ್ಲುಗಳು (ಶಂಕರ ಟೆಕ್ಸ್‌ಟೈಲ್ ಮಿಲ್ ದಾವಣಗೆರೆ, ನಂದಿಹಸವಿ ಜವಳಿ ಗಿರಣಿ, ನರಗುಂದ, ಸಹಕಾರಿ ನೂಲಿನ ಗಿರಣಿ, ವಿಜಾಪುರ, ಕೆ.ಆರ್.ಮಿಲ್ಸ್, ಮೈಸೂರು) ಕೆಲಸವನ್ನು ಅನಧಿಕೃತವಾಗಿ ನಿಲ್ಲಿಸಿ ಸುಮಾರು ೧೦,೦೦೦ ಕೆಲಸಗಾರರಿಗೆ ಕೆಲಸವಿಲ್ಲದಂತೆ ಮಾಡಿ, ಎಲ್ಲರನ್ನೂ ನಿರುದ್ಯೋಗಕ್ಕೆ ತಳ್ಳಿದ್ದಾರೆ. ಈ ವಿಷಯವಾಗಿ ಅನೇಕ ಮನವಿಗಳನ್ನು ಮಾಡಿಕೊಂಡಾಗ್ಯೂ ಮತ್ತು ಸಂಬಂಧಪಟ್ಟ ಮಂತ್ರಿಗಳಿಗೂ ಮತ್ತು ಇಲಾಖೆಯ ಮಂತ್ರಿಗಳ ಗಮನಕ್ಕೆ ತಂದರೂ ಈವರೆಗೆ ಯಾವುದೇ ಪ್ರಯೋಜನವಾಗಿರುವುದಿಲ್ಲ. ಕಳೆದ ಸುಮಾರು ೧೮ ತಿಂಗಳುಗಳಿಂದ ಕೆಲಸಗಾರರಿಗೆ ಕೆಲಸ ಇಲ್ಲದಿರುವುದರಿಂದ ಕಾನೂನು ಪ್ರಕಾರ ಲೇ ಆಫ್ ಪರಿಹಾರ ಕೊಡಬೇಕಾಗಿತ್ತು, ಅದನ್ನು ಕೊಟ್ಟಿಲ್ಲ. ಮೇಲೆ ಕಾಣಿಸಿದ ಮಿಲ್ ಮಾಲೀಕರು ಸರ್ಕಾರದ ಕಾನೂನು ಕಟ್ಟಳೆಗಳನ್ನು ಗಾಳಿಗೆ ತೂರಿ ಸ್ವಚ್ಛಂದವಾಗಿದ್ದಾರೆ. ಈ ವಿಷಯದಲ್ಲಿ ತಾವು ಸಂಬಂಧಪಟ್ಟ ಮಾಲೀಕರು ಅಧಿಕಾರಿಗಳು ಮತ್ತು ಮಂತ್ರಿಗಳು ಕಾರ್ಮಿಕ ಸಂಘದ ಮುಂದಾಳುಗಳನ್ನು ಕರೆಯಿಸಿ, ಕೆಲಸ ಪ್ರಾರಂಭಿಸಲು ಮತ್ತು ಕೈಗಾರಿಕೆಗಳನ್ನು ಮುಚ್ಚಿರುವ ದಿನಗಳಲ್ಲಿ ಪರಿಹಾರಕೊಡಿಸಿ ರಾಜ್ಯದಲ್ಲಿ ಕಾರ್ಮಿಕ ರಂಗದಲ್ಲಿ ಶಾಂತಿಯನ್ನು ಕಾಪಾಡಿಕೊಂಡು ಬರಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಮಂಜುನಾಥ್(ಕಾರ್ಮಿಕ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ದಾವಣಗೆರೆ ಟೆಕ್ಸ್‌ಟೈಲ್ಸ್ ಮಿಲ್ ಮುಚ್ಚಿರುವ ಬಗ್ಗೆ ಮತ್ತು ಪ್ರಾರಂಭಿಸುವ ಬಗ್ಗೆ ಹೇಳಿದ್ದಾರೆ. ಇದರ ಬಗ್ಗೆ ಈಗಾಗಲೇ ನಾನು ಮತ್ತು ಪಂಪಾಪತಿ ಇಬ್ಬರೂ ಸೇರಿ ಚರ್ಚೆಮಾಡಿದ್ದೇವೆ. ಅದು ಮಾನ್ಯ ಸದಸ್ಯರಿಗೂ ಗೊತ್ತಿದೆ. ನಂದಿಹಸವಿ ಜವಳಿ ಗಿರಣಿ ನರಗುಂದ, ಇದರ ಬಗ್ಗೆಯೂ ಸಹ ಈಗಾಗಲೇ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇನೆ. ಇನ್ನು ಸಹಕಾರಿ ನೂಲಿನ ಗಿರಣಿ, ವಿಜಾಪುರ ಈ ಮಿಲ್ ಬಗ್ಗೆಯೂ ನಾನು ಈಗಾಗಲೇ ಸಹಕಾರ ಮಂತ್ರಿಗಳಲ್ಲಿ ಹೇಳಿದ್ದೇನೆ. ಇದು ಇಷ್ಟರಲ್ಲೇ ಸಾಲ್ವುವಾಗುತ್ತದೆ. ಇನ್ನು ಕೆ ಆರ್.ಮಿಲ್ಸ್, ಮೈಸೂರು ಈ ಮಿಲ್ ಬಗ್ಗೆ ನಿನ್ನೆಯ ದಿವಸ ನಾನೂ ಮತ್ತು ಕೈಗಾರಿಕೆ ಸಚಿವರ ಛೇಂಬರಿನಲ್ಲಿ ಮೀಟಿಂಗ್ ಮಾಡಿದೆವು. ಅವರನ್ನೂ ಸಹ ಕರೆಸಿದ್ದೆವು. ಅವರು ಇದರ ಬಗ್ಗೆ ರಿಲೀಫ್ ಕೇಳಿದ್ದಾರೆ. ಇದರ ಬಗ್ಗೆ ಈಗಾಗಲೇ ಪರಿಶೀಲನೆ ಮಾಡುತ್ತಿದ್ದೇವೆ. ಇದನ್ನು ಆದಷ್ಟು ಜಾಗ್ರತೆಯಾಗಿ ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ಪಂಪಾಪತಿ.—ಇಲ್ಲಿರುವ ನೌಕರರು ಒಂದು, ಒಂದೂವರೆ ವರ್ಷದಿಂದಲೂ ನಿರುದ್ಯೋಗಿಗಳಾಗಿದ್ದಾರೆ. ಆದಷ್ಟು ಜಾಗ್ರತೆ ಪ್ರಾರಂಭಮಾಡಿಸುತ್ತೀರಾ?